**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು</u>**

**ಸಿ.ಸಿ.ನಂ.542/2019**

**ದಿನಾಂಕಃ27-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ1 ಸಿ.ಡಬ್ಲ್ಯುಃ2

ಸಾಕ್ಷಿಯ ಹೆಸರು : ರಮೇಶ
ತಂದೆಯ ಹೆಸರು : ಬಸಪ್ಪ
ವಯಸ್ಸು : 40 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಜೋಡಿತಿಮ್ಮಾಪುರ

**<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ</u>**

ಮೃತ ಕಾಂತರಾಜು ಗೊತ್ತು. ನನ್ನ ಅಂಗಡಿ ಬೀರೂರಿನಿ ಎರಡನೇ ರೈಲ್ವೇಗೇಟ್ ಹತ್ತಿರ ಇದೆ. ದಿಃ24-08-2017 ರಂದು ಸಂಜೆ 6.00 ರಿಂದ 6.30 ರ ಸಮಯದಲ್ಲಿ ನಾನು ನನ್ನ ಅಂಗಡಿಯಲ್ಲಿದ್ದಾಗ ಮೃತ ಕಾಂತರಾಜ್ ನಮ್ಮ ಅಂಗಡಿಯ ಎದುರು ಎನ್.ಹೆಚ್ -206 ರಸ್ತೆಯ ಪಕ್ಕದಲ್ಲಿ ನಡೆದುಕೊಂಡು ಜೋಡಿತಿಮ್ಮಾಪುರ ಕಡೆಯಿಂದ ನಮ್ಮ ಅಂಗಡಿಕಡೆಗೆ ಬರುತ್ತಿದ್ದರು. ಅದೇ ಸಮಯದಲ್ಲಿ ಶಿವಮೊಗ್ಗಕಡೆಯಿಂದ ಬೀರೂರು ಕಡೆ ಹೋಗಲು 10 ಚಕ್ರದ ಲಾರಿ ತಮಿಳುನಾಡಿನ ಲಾರಿಯೊಂದು ವೇಗವಾಗಿ ಬಂದು ಕಾಂತರಾಜುರವರಿಗೆ ಡಿಕ್ಕಿಪಡಿಸಿರುತ್ತದೆ. ಆಗ ಕಾಂತರಾಜು ನೆಲಕ್ಕೆ ಬಿದ್ದನು ಲಾರಿಯು ಅವನ ಸೊಂಟದಿಂದ ಕೆಳಭಾಗದಲ್ಲಿ ಹರಿದುಹೋಗಿರುತ್ತದೆ. ಆಗ ಕಾಂತರಾಜುವಿನ ಸೊಂಟದ ಕೆಳಬಾಗ ಪೂರ್ತಿ ಜೆಜ್ಜಿಹೋಗಿತ್ತು. ನಂತರ ಆಂಬುಲೆನ್ಸ್ ಗೆ ಕರೆ ಮಾಡಿ ಬೀರೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ನಾನು ಚಾಸಾ-1 ರವರಿಗೆ ಅಪಘಾತದ ಮಾಹಿತಿ ತಿಳಿಸಿರುತ್ತೇನೆ. ಅವರ ಊರಿನವರು ಕಾಂತರಾಜುರವರನ್ನು ಕರೆದುಕೊಂಡು ಆಂಬುಲೆನ್ಸ್ ಲ್ಲಿ ಹೋಗಿರುತ್ತಾರೆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುವಾಗ ಮಾರ್ಗಮದ್ಯದಲ್ಲಿ ತರೀಕೆರೆ ಸಮೀಪ ಮೃತಪಟ್ಟಿರುವುದಾಗಿ ನನಗೆ ತಿಳಿಯಿತು. ಸದರಿ ಲಾರಿ ಸಂಖ್ಯೆಯನ್ನು ಹೇಳಲಾಗುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ನಾನು ಲಾರಿಯ ಚಾಲಕನನ್ನು ನೋಡಿರುವುದಿಲ್ಲ ಏಕೆಂದರೆ ಲಾರಿಯನ್ನು ಸ್ವಲ್ಪ ಮುಂದೆ ನಿಲ್ಲಿಸಿ ಆರೋಪಿ ಪರಾರಿಯಾಗಿರುತ್ತಾನೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟ ಬಗ್ಗೆ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರಿಗೆ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಹಿಸಸಅ ಅವರಿಂದಃ</u>**

ಆ ದಿನ ಅಪಘಾತಪಡಿಸಿದ ಲಾರಿ ಟಿಎನ್-34-ಕ್ಯೂ-6710 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಾರಿಯ ಚಾಲಕನೇ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಅಪಘಾತವು ಲಾರಿಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ಆ ದಿನ ಆರೋಪಿಯ ಹೆಸರು ರಮೇಶ ತಮಿಳುನಾಡಿನವನು ಆತನನ್ನು ನೋಡಿದರೆ ಪುನಃ ಗುರುತಿಸುವುದಾಗಿ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯ ಭಾಗವನ್ನು ಅಲ್ಲಗೆಳೆದ ಕಾರಣ ಸದರಿ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು. ಆ ದಿನ ನಾನು ಲಾರಿಯ ಸಂಖ್ಯೆಯನ್ನು ಆರೋಪಿಯ ವಿವವರಗಳನ್ನು ನೋಡಿ ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿಯಲ್ಲ. ಸದರಿ ಲಾರಿ ನಂಬರ್ ಮತ್ತು ಆರೋಪಿಯ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯವಾಗಲೀ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವೈ.ಟಿ.ಎಂ ವಕೀಲರುಃ-</u>**

ಅಪಘಾತ ನಡೆದ ಸಮಯದಲ್ಲಿ ನಾನು ಅಂಗಡಿಯ ಒಳಗೆ ಇದ್ದೆ. ಅಪಘಾತ ನಡೆದುದ್ದನ್ನು ನೀವು ಖುದ್ದಾಗಿ ನೋಡಿಲ್ಲ ಎಂದರೆಸಾಕ್ಷಿಯು ಶಬ್ದಕೇಳಿ ನಾನು ಹೋರಗೆ ಹೋಗಿ ನೋಡಿದೆ ಆಗ ಲಾರಿ ಮುಂದು ಹೋಗುತ್ತಿತ್ತು ಎಂದು ನುಡಿಯುತ್ತಾರೆ. ಅಪಘಾತ ಸ್ಥಳದಲ್ಲಿ ಎನ್.ಹೆಚ್ ರಸ್ತೆಯ ಅಡ್ಡಲಾಗಿ ಬೀರೂರು ಶಿವಮೊಗ್ಗ ರೈಲ್ವೆ ಹಳಿ ಹಾದುಹೋಗಿದೆ ಎಂದರೆ ಸರಿ. ಸದರಿ ರೈಲ್ವೆ ಹಳಿ ಗೇಟ್ ಬಳಿ ಹಂಪ್ ಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿ. ಅಪಘಾತವಾದ ಸ್ಥಳದ 200 ಮೀಟರ್ ಅಂತರದಲ್ಲಿ ಹಂಪುಗಳು ಇರುತ್ತವೆ ಅಲ್ಲಿಯೇ ಬಿ.ಜಿ.ಎಸ್ ಕಾನ್ವೆಂಟ್ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಶಾಲೆ ಮತ್ತು ಹಂಪುಗಳು ಇರುವ ಕಾರಣ ಯಾವುದೇ ವಾಹನಗಳು ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನೋಡದೆ ಇದ್ದರು ಸಹ ಮೃತ ವ್ಯಕ್ತಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**
**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು,
ಕಡೂರು.